# ತಪೋವಾಣಿ

ಸಂ. 8 ಸಂ. 7 ಜುಲೈ 2011 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ಋಷಿಗಳು ಉನ್ನತ ಸ್ತರಗಳಿಂದ ಹೊಸ ಚೈತನ್ಯಗಳನ್ನು ತಂದು ಪ್ರಪಂಚದೆಲ್ಲೆಡೆ ಹರಡುತ್ತಿದ್ದಾರೆ. ಈ ಪ್ರಪಂಚದ ಬೆಳಕಿನ ಕಾರ್ಯಕರ್ತರೂ ಸಹ ಹೊಸ ಚೈತನ್ಯಗಳನ್ನು ಚಾನಲ್ ಮಾಡುತ್ತಿದ್ದಾರೆ. ಶಂಬಲ, ರಾ ದೇವರು ಮತ್ತು ಫೋಟಾನ್ ಬೆಲ್ಟ್‌ನಿಂದ ಸಹ ನಾವು ಚೈತನ್ಯಗಳನ್ನು ಪಡೆಯುತ್ತಿದ್ದೇವೆ. ಈ ಚೈತನ್ಯಗಳು ಎಷ್ಟೇ ಶಕ್ತಿಯುತವಾಗಿದ್ದರೂ ಅವು ನೇರವಾಗಿ ನಮ್ಮನ್ನು ಪರಿವರ್ತಿಸಲಾರವು, ಏಕೆಂದರೆ ನಮಗೆ ಇಚ್ಛಾ ಸ್ವಾತಂತ್ರ್ಯವಿದೆ. ಈ ಚೈತನ್ಯಗಳು ನಾವು ಬದಲಾಗಲು ಅವಕಾಶಗಳನ್ನು ಸೃಷ್ಟಿಮಾಡುತ್ತವೆ ಮತ್ತು ನಮಗೆ ಅವಕಾಶಗಳನ್ನು ಒದಗಿಸುತ್ತವೆ. ನಾವು ಆಯ್ಕೆಮಾಡಿದರೆ, ಈ ಚೈತನ್ಯಗಳು ನಮ್ಮ ನಿರ್ಧಾರವನ್ನು ಬಲಪಡಿಸುತ್ತವೆ.

ಈ ದೇಶದಲ್ಲಿ ಮತ್ತು ಪ್ರಪಂಚದೆಲ್ಲೆಡೆ ಭ್ರಷ್ಟಾಚಾರ ಮತ್ತು ದಬ್ಬಾಳಿಕೆಗಳ ವ್ಯವಸ್ಥೆಗಳನ್ನು ಸರಿಪಡಿಸಲು ನಡೆಯುತ್ತಿರುವ ಹೋರಾಟಗಳಿಗೆ ಕಾರಣ, ಪರಿವರ್ತನೆಯ ಚೈತನ್ಯಗಳು ಒದಗಿಸಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಜನರು ಆಯ್ಕೆ ಮಾಡಿರುವುದು. ಆದರೆ ಅಧಿಕಾರದಲ್ಲಿರುವ ಜನ ಬದಲಾಗದೆ ಉಳಿದಿದ್ದಾರೆ. ಈಗ ಏನಾಗುತ್ತದೆ? ಆಂದೋಳನಗಳಿಗೆ ಏನಾಗುತ್ತದೆ? ಜನರ ಕನಸುಗಳು ಮತ್ತು ಮಹತ್ವಾಕಾಂಕ್ಷೆಗಳು ಏನಾಗುತ್ತವೆ?

ಮಾಮೂಲು ಪರಿಸ್ಥಿತಿಗಳಲ್ಲಾಗಿದ್ದರೆ, ಜನರ ಹೋರಾಟಗಳಿಗೆ ಸೋಲಾಗುತ್ತಿತ್ತು ಮತ್ತು ಭ್ರಷ್ಟ ನಿರಂಕುಶಾಡಳಿತ ವ್ಯವಸ್ಥೆಗಳು ತಮ್ಮ ಆಳ್ವಿಕೆಯನ್ನು ಮುಂದುವರೆಸುತ್ತಿದ್ದವು. ಆದರೆ ಕಾಲ ಬದಲಾಗುತ್ತಿದೆ. ನಾವು ಬೆಳಕಿನ ಯುಗದೊಳಕ್ಕೆ ಚಲಿಸುತ್ತಿದ್ದೇವೆ. 2012ರ ಘಟನೆಗಳು ತಮ್ಮದೇ ಆದ ರೀತಿಯಲ್ಲಿ ಭ್ರಷ್ಟಚಾರ, ಹಿಂಸಾಚಾರ ಮತ್ತು ಅಸತ್ಯದಂಥ ಎಲ್ಲ ವ್ಯವಸ್ಥೆಗಳನ್ನು ಕೆಳಗಿಳಿಸುತ್ತವೆ. ಇನ್ನು ಮುಂದೆ ಬದಲಾವಣೆ ಒಂದು ಆಯ್ಕೆಯಲ್ಲ. ಅದು ಪೂರ್ವ ನಿರ್ಧಾರಿತವಾಗಿದೆ.

ನಾವು ಸೂಕ್ಷ್ಮ ಲೋಕದೊಳಗೆ ಇಣುಕಿ ನೋಡಲು ಸಾಧ್ಯವಾದರೆ, ಬದಲಾವಣೆಗಳು ಈಗಾಗಲೇ ಸಂಭವಿಸಿರುವುದನ್ನು ನೋಡಬಹುದು. ಅವು ಭೌತಿಕ ಮಟ್ಟದಲ್ಲಿ ಪ್ರಕಟವಾಗಬೇಕು. ಅದಕ್ಕೆ ಕಾಲ ಕೂಡಿಬರಬೇಕು ಅಷ್ಟೆ. ಇದು ಜಾಗತಿಕ ಮತ್ತು ವೈಯಕ್ತಿಕ ಮಟ್ಟಗಳ ಘಟನೆಗಳಿಗೂ ಅನ್ವಯವಾಗುತ್ತದೆ.

ಭ್ರಷ್ಟಾಚಾರದ ವಿರುದ್ಧ ನಡೆಯುತ್ತಿರುವ ಹೋರಾಟ ನಾಟಕ ಮತ್ತು ಅನರ್ಥಗಳಿಂದ ಹೊರತಾಗಿಲ್ಲ. ವೈಯಕ್ತಿಕ ಅಜೆಂಡಾಗಳಿಗೆ ಒತ್ತುಕೊಡುತ್ತಾ ಸ್ಪಷ್ಟ ಮಾರ್ಗವನ್ನು ಅಸ್ತವ್ಯಸ್ತಗೊಳಿಸುವುದರಿಂದ ಆಂದೋಳನಕ್ಕೆ ಧಕ್ಕೆಯುಂಟಾಗುವ ಸಾಧ್ಯತೆ ಇದೆ. ಆದರೆ ಬದಲಾವಣೆಯ ಚೈತನ್ಯಗಳು ನಿರ್ಣಯಿಸಿರುವ ಪಥವನ್ನು ಬದಲಾಯಿಸಲಾಗುವುದಿಲ್ಲ. ಬೆಳಕಿನ ಮಾಸ್ಟರ್‌ಗಳು ನಿರ್ಣಯಿಸಿರುವ ದೈವೀಕ ಅಜೆಂಡಾವನ್ನು ಉರುಳಿಸಲಾಗುವುದಿಲ್ಲ. ಅದೇ ನಮಗಿರುವ ಭರವಸೆ.

ಅರ್ಧ ವರ್ಷ ಕಳೆದಿದೆ! ಈಗ ಪ್ರತಿಯೊಬ್ಬರೂ ಕಾಲದ ಶೀಘ್ರ ಗತಿಯನ್ನು ಗಮನಿಸುತ್ತಿದ್ದಾರೆ ಮತ್ತು ಅದರ ಬಗ್ಗೆ ಆಶ್ಚರ್ಯಪಡುತ್ತಿದ್ದಾರೆ. ನಾವು ಈ ಶೀಘ್ರ ಗತಿಯನ್ನು ವಿವರಿಸುವುದು ಹೇಗೆ! ನಾವು ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ! ಅದು ಸಾಧ್ಯವಿಲ್ಲ. ಆದರೆ, ದಿನದ ಘಂಟೆಗಳು ಸಂಕುಚಿತವಾಗಿವೆ ಎಂಬುದು ಒಂದು ವಾಸ್ತವ. ಈ ಸಂಕುಚಿತ ಬಹಳ ಕಾಲದವರೆಗೆ, ನಾವು 2012ನ್ನು ದಾಟುವವರೆಗೆ, ಮುಂದುವರಿಯುತ್ತದೆ. ■

### ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

#### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

#### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

#### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

#### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

#### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

#### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

#### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

#### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/– ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**2011 ಜೂನ್ 12ರಂದು ಗುರೂಜಿಯವರು ಮತ್ತು ವಿದ್ಯಾರ್ಥಿಗಳು ಶ್ರೀ ಆಂಜನೇಯ ಸ್ವಾಮಿಯ ವಿಗ್ರಹವನ್ನು ಚೈತನ್ಯೀಕರಿಸುತ್ತಿರುವುದು.**

### ಸುದ್ದಿ–ಸೂಚನೆ

- 12–6–2011ರಂದು ಚಿಕ್ಕಗುಬ್ಬಿ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಿದ ಶ್ರೀ ಆಂಜನೇಯ ದೇವಸ್ಥಾನದ ದೇವರ ವಿಗ್ರಹವನ್ನು ಋಷಿಗಳು ಚೈತನ್ಯಗೊಳಿಸುವಾಗ 150ಕ್ಕೂ ಹೆಚ್ಚು ಜನರು ಅಲ್ಲಿ ಸೇರಿ ಧ್ಯಾನ ಮಾಡಿದರು.
- ತಪೋನಗರ ನಿವಾಸಿಗಳು 2–6–2011 ಮತ್ತು 15–6–2011ರಂದು ಗ್ರಹಣದ ವಿಶೇಷ ಧ್ಯಾನಕ್ಕಾಗಿ ತಪೋನಗರದಲ್ಲಿ ಸೇರಿದ್ದರು.
- ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮದ ಸಂದರ್ಭದಲ್ಲಿ, 22–5–2011ರಂದು 450ಕ್ಕೂ ಹೆಚ್ಚು ಜನರು ತಪೋನಗರದಲ್ಲಿ ಮತ್ತು 18–5–2011ರಂದು 100ಕ್ಕೂ ಹೆಚ್ಚು ಜನರು ಆನೇಕಲ್‌ನಲ್ಲಿ ಸೇರಿದ್ದರು.
- "Preparing for 2012" ಪುಸ್ತಕವನ್ನು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಗುರೂಜಿಯವರ ಹುಟ್ಟುಹಬ್ಬ ಆಚರಣೆ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.
- 15–7–2011ರಂದು ಮಧ್ಯಾಹ್ನ 12ಕ್ಕೆ ಗುರುಪೂರ್ಣಿಮಾ ಪ್ರಯುಕ್ತ ವಿಶೇಷ ಧ್ಯಾನವನ್ನು ತಪೋನಗರದಲ್ಲಿ ಆಯೋಜಿಸಲಾಗಿದೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಶುಕ್ರ | ಅಮಾವಾಸ್ಯೆ<br>ಸೂರ್ಯಗ್ರಹಣ<br>(ಮಧ್ಯಾಹ್ನ 1.23–2.52) |
| 02 | ಶನಿ | ಆಷಾಢ ಮಾಸ ಆರಂಭ |
| 08 | ಶುಕ್ರ | ಶುಕ್ಲ ಅಷ್ಟಮಿ |
| 10 | ಭಾನು | ಶುಕ್ಲ ದಶಮಿ |
| 15 | ಶುಕ್ರ | ಗುರುಪೂರ್ಣಿಮಾ |
| 17 | ಭಾನು | ದಕ್ಷಿಣಾಯನ ಆರಂಭ |
| 23 | ಶನಿ | ಕೃಷ್ಣಾಷ್ಟಮಿ |
| 29 | ಶುಕ್ರ | ಮಾಸ ಶಿವರಾತ್ರಿ |
| 30 | ಶನಿ | ಅಮಾವಾಸ್ಯೆ |

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 01–05–11 | ಬೀನಾ ಬೆಹ್ರೆ, ಸುವರ್ಣ ಪಟ್ಕಿ & ಗಂಗಾಧರನ್ T.S. |
| 08–05–11 | ಯುತಿಕಾ ಚಂದ್ರನ್, ಪ್ರದೀಪ್ ದುಬೆ & ಶ್ವೇತಾ ಕೊಸಾಮ್ಕರ್ |
| 15–05–11 | ಸುಜಾತ B, ಸೀಮಾ ಅಜಯ್ & ಪವಿತ್ರಾ |
| 22–05–11 | ಬಾರ್ಬರಾ ವಾನ್ ಗ್ರೋಟ್, ರಮೇಶ್ ಬೊರ್ಕರ್, ಶಾರದಮ್ಮ, ಸುಬ್ಬಯ್ಯ & ಲತಿಕಾ ಕುಲಕರ್ಣಿ |
| 29–05–11 | ಶೋಭಾ ದುರ್ಗಾನಂದ, ಅಲ್ಕಾ ವಿಂಝೆ, ವಿಜಯ್‌ಕುಮಾರ್, ಗಂಗಾಧರನ್, ಕಿರಣ್ ಕದಮ್ & ಲಕ್ಷ್ಮಿ ಅಭಿಚಂದಾನಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11–12<br>ವಿಶೇಷ ಧ್ಯಾನ & ಲೈಟ್‌ಚಾನಲಿಂಗ್: ಮಧ್ಯಾಹ್ನ 12–1 |
| 01–07–11 | ಸೂರ್ಯಗ್ರಹಣ<br>ವಿಶೇಷ ಧ್ಯಾನ :<br>ಮಧ್ಯಾಹ್ನ 1.23–2.52 |
| 10–07–11 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 15–07–11 | ಗುರುಪೂರ್ಣಿಮಾ<br>ವಿಶೇಷ ಧ್ಯಾನ :<br>ಮಧ್ಯಾಹ್ನ 12–1 |
| 17–07–11 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 31–07–11 | ಅಖಂಡ ಧ್ಯಾನ :<br>ಬೆಳಿಗ್ಗೆ 10 – ಮಧ್ಯಾಹ್ನ 1 |

**9–7–2011 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

**ಈಗ ಗುರೂಜಿಯವರು 'Speaking Tree'ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಅವರ ಬ್ಲಾಗ್–ಅನ್ನು ಓದಲು ಮತ್ತು ಅವರ ವಿಡಿಯೋ ಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.**

## ವಿಭಿನ್ನ ಛಾಯೆಗಳು

**ಪ್ರಗತಿ ರಾಜ್; ಅನು: ವರ್ಷಾ ಗುರ್ಜರ್**

ಮುಂಜಾವಿನ ಆಗಸವನ್ನು ಒಮ್ಮೆ ಗಮನಿಸಿ. ಅದು ಪೂರ್ವದಿಕ್ಕಿನಲ್ಲೆಲ್ಲಾ ಕೇಸರಿ ಬಣ್ಣದ ಛಾಯೆಗಳನ್ನು ಎರಚಿರುವ, ಆದಿ ಅಂತ್ಯವಿಲ್ಲದ ಒಂದು ಸುಂದರವಾದ ನೀಲಿ ಕ್ಯಾನ್ವಾಸ್‌ನಂತೆ ಕಾಣುತ್ತದೆ. ಕಣ್ಣುಗಳನ್ನು ಮುಚ್ಚಿ ಬೆಳಗಿನ ತಂಗಾಳಿಯನ್ನು ಉಸಿರಾಡಿದಾಗ, ಆನಂದ ಹೃದಯಾಂತರಾಳದಲ್ಲಿ ಮಿಡಿಯುತ್ತದೆ. ಹಸಿರು ಹುಲ್ಲುಗಳ ಮೇಲಿನ ಇಬ್ಬನಿ, ನಾವು ಅವನ್ನು ಸಂಗ್ರಹಿಸಿ, ಅವುಗಳಿಂದ ಆಭರಣ ಮಾಡಬಹುದೇನೋ ಎಂದು ಅನಿಸುತ್ತದೆ. ಪ್ರಾಮಾಣಿಕವಾಗಿ ನಕ್ಕಾಗ ನಮ್ಮೊಳಗೆ ಆನಂದ ಪುಟಿದೇಳುತ್ತದೆ. ಅದೆಂಥ ಸುಂದರ ಗಳಿಗೆ!

ಸುತ್ತಮುತ್ತಲಿನ ಹಚ್ಚಹಸಿರನ್ನು ನೋಡಿ. ದೇವರು ಹೇಗೆ ಹಸಿರುಬಣ್ಣದ ಛಾಯೆಗಳನ್ನು ಇಷ್ಟೊಂದು ಆಕರ್ಷಕವಾಗಿ ಎಲ್ಲಾಕಡೆ ಚಿತ್ರಿಸಿದ್ದಾನೆ ಎಂದು ಆಶ್ಚರ್ಯಪಡುತ್ತೇವೆ. ದೇವರೊಬ್ಬ ಚಿತ್ರಕಾರನಿರಬೇಕೆಂದು ಅನಿಸುತ್ತದೆ. ಹೌದು, ಅವನು ಅದ್ವಿತೀಯ ಚಿತ್ರಕಾರನಾಗಿರಲೇಬೇಕು!

ಸುತ್ತಮುತ್ತ ಎಲ್ಲಾಕಡೆ ಅವನನ್ನು ಅನುಭವಿಸಿ. ಇದಕ್ಕಿಂಥ ಹೆಚ್ಚಿನ ಆಧ್ಯಾತ್ಮಿಕತೆ ಏನಿದೆ? ತಂಗಾಳಿ ತನ್ನದೇ ಭಾಷೆಯಲ್ಲಿ ಪಿಸುಗುಡುವುದನ್ನು ಕೇಳಿ. ಸುಂದರವಾದ ಹನಿಗಳೊಂದಿಗೆ ಮಳೆ ಕೆಳಗಿಳಿಯುವುದನ್ನು ನೋಡಿ. ಮಿಲಿಯಾಂತರ ಹನಿಗಳ ಮುಖಾಂತರ ಭೂಮಿಯನ್ನು ಸಂಧಿಸುವುದು ಬಹುಶಃ ಆಕಾಶದ ವಿಧಾನವಾಗಿರಬಹುದು!

ರಾತ್ರಿಯ ಆಕಾಶ, ಎಲ್ಲೆಡೆ ನಕ್ಷತ್ರಗಳನ್ನು ಹರಡಿರುವ ಕಪ್ಪು ಬಣ್ಣದ ಉಡುಗೆಯನ್ನು ತೊಟ್ಟಂತಿದೆ. ಇದು ದಿನದ ಕೊನೆಯಲ್ಲಿ ಆಕಾಶ ತನ್ನ ಒಡವೆಗಳ ಪೆಟ್ಟಿಗೆಯನ್ನು ತೆರೆದಿಟ್ಟಂತಿದೆ. ನಿಮಗಿಷ್ಟವಾದ ಸಂಗೀತವನ್ನು ಕೇಳಿ. ಆಗ, "ಸಂಗೀತವನ್ನು ಕೇಳುತ್ತಾ ನೀವು ಸಮಾಧಿಯನ್ನು ಅನುಭವಿಸಬಹುದು" ಎಂದು ಮಾಸ್ಟರ್ ಹೇಳಿರುವುದು ಎಷ್ಟು ನಿಜವಾದುದು ಎಂದು ತಿಳಿಯುತ್ತದೆ. ಇದೊಂದು ದಿವ್ಯದರ್ಶನ!

ಈ ಪ್ರಪಂಚ ಪ್ರಕೃತಿ, ಸಂಗೀತ, ಸಿನಿಮಾ ಮತ್ತು ಇನ್ನೂ ಅನೇಕ ರೂಪಗಳಿಂದ ನಮಗಾಗಿ ಸೃಷ್ಟಿಸಿದ ಮಾಯೆ ಎಂಬುದು ಎಷ್ಟೊಂದು ನಿಜ. ಇಷ್ಟೆಲ್ಲವೂ ನಮಗಾಗಿಯೇ ಅತ್ಯಂತ ಪ್ರೀತಿಯಿಂದ ಸೃಷ್ಟಿಗೊಂಡಿದೆ. ಪ್ರೀತಿಯನ್ನು ವ್ಯಕ್ತಪಡಿಸಿ. ಆಗ ನಿಮ್ಮ ಹೃದಯ ಪರಿಶುದ್ಧವಾದ ಸಂತೋಷದಿಂದ ಮಿಲಿಯಾಂತರ ಬಣ್ಣಗಳಲ್ಲಿ ಸ್ಫೋಟಗೊಳ್ಳುವುದನ್ನು ನೋಡಿ!

ಸುತ್ತಲಿನ ಸೃಷ್ಟಿಯಲ್ಲಿ ಇಷ್ಟೊಂದು ವೈವಿಧ್ಯತೆ ಇರುವಾಗ, ಮಾಸ್ಟರ್ ರಾಮಕೃಷ್ಣ ಪರಮಹಂಸರು ಆಗಸದಲ್ಲಿ ಹಾರುತ್ತಿರುವ ಹಕ್ಕಿಗಳನ್ನು ಕಂಡಾಗ ಸಮಾಧಿಯನ್ನು ಅನುಭವಿಸಿರುವುದು ಆಶ್ಚರ್ಯವೇನಲ್ಲ. ■

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

ಯಾರು ತಮ್ಮ ಹೃದಯಗಳಲ್ಲಿ ಗುರೂಜಿಯವರನ್ನು ಕಂಡುಕೊಂಡಿದ್ದಾರೋ ಅವರೆಲ್ಲರಿಗೂ ವರ್ಷದಲ್ಲೇ ಅತ್ಯಂತ ಮಹತ್ವದ ತಿಂಗಳು – ಮೇ. ಈ ವರ್ಷ ಗುರೂಜಿಯವರ ಜನ್ಮದಿನವನ್ನು ಮೂರು ಬಾರಿ ಆಚರಿಸಲಾಯಿತು. 18ರಂದು ಬೆಳಿಗ್ಗೆ ಆನೇಕಲ್‌ನ ಸಪ್ತರ್ಷಿಕೇಂದ್ರದಲ್ಲಿ, ಸಂಜೆ ತಪೋನಗರ ನಿವಾಸಿಗಳು, ಮತ್ತು 22ರಂದು ತಪೋನಗರದಲ್ಲಿ ಎಲ್ಲಾ ಸಾಧಕರು ಸೇರಿ ಸಂಭ್ರಮಿಸಿದರು. ಗುರೂಜಿಯವರತ್ತ ಹರಿದ ಎಲ್ಲರ ಪ್ರೀತಿ–ಪ್ರೇಮಗಳು ಬಹುಶಃ ಅಕ್ಷಯ ತೃತೀಯ ಹೇರಳವಾಗಿ ನೀಡಿದ ಚೈತನ್ಯಗಳನ್ನು ಮೀರಿರಬಹುದು.

ತಪೋನಗರ ನಿವಾಸಿಗಳು 18ರ ಸಂಜೆ ಕಾರ್ಯಕ್ರಮ ನಡೆದ ಸ್ಥಳವನ್ನು ರಂಗೋಲಿ ಮತ್ತು ಹೂವುಗಳಿಂದ ಅಲಂಕರಿಸಿದರು. ಗುರೂಜಿಯವರು ಕೇಕ್ ಕತ್ತರಿಸಿದ ನಂತರ, ಅವರಿಗೆ ಹೂಗುಚ್ಛ ಮತ್ತು ಉಡುಗೊರೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಮೇ ತಿಂಗಳಲ್ಲಿ ಜನ್ಮದಿನವಿದ್ದ, ಶ್ರೀಮತಿ ಉಷಾ ವಾಷನ್ ಮತ್ತು ಇತರ ಅದೃಷ್ಟವಂತರು ಕೂಡಾ ಗುರೂಜಿಯರ ಜೊತೆ ಸೇರಿದರು. ಗುರೂಜಿಯವರ ಸಾನ್ನಿಧ್ಯ ತಮ್ಮ ಜೀವನದಲ್ಲಿ ಎಷ್ಟು ಅಮೂಲ್ಯ ಎಂಬುದನ್ನು ಅನೇಕರು ತಮ್ಮ ಹೃದಯಾಂತರಾಳದಿಂದ ವ್ಯಕ್ತಪಡಿಸಿದರು ಮತ್ತು ಅದಕ್ಕೆ ಗುರೂಜಿಯವರು ಸ್ಪಂದಿಸಿದರು. ಗಿಟಾರ್‌ನಿಂದ ಹೊಮ್ಮಿದ ಜನ್ಮದಿನದ ಶುಭಾಶಯ ಗೀತೆಯೊಂದಿಗೆ ಆ ದಿನದ ಕಾರ್ಯಕ್ರಮ ಮುಕ್ತಾಯವಾಯಿತು.

22ರಂದು ತಪೋನಗರವೆಲ್ಲ ಗುಲಾಬಿ ಮತ್ತು ಬಿಳಿ ಬಣ್ಣದ ಹೂಗಳಿಂದ ಅಲಂಕಾರಗೊಂಡು ಕಂಗೊಳಿಸುತ್ತಿತ್ತು. ಅವು ಪ್ರೀತಿ ಮತ್ತು ಪರಿಶುದ್ಧತೆಗಳನ್ನು ಪ್ರತಿನಿಧಿಸುತ್ತಿದ್ದವು. ಆ ದಿನ ಮಾತನಾಡಿದವರ ಮಾತಿನ ವಿಷಯ ಅನೇಕರ ಭಾವನೆಗಳು ಮತ್ತು ಅನುಭವಗಳನ್ನು ಪ್ರತಿನಿಧಿಸುತ್ತಿತ್ತು. ಗುರೂಜಿಯವರ ಮಾತುಗಳ ನಂತರ ವೈಯಕ್ತಿಕ ಆಶೀರ್ವಾದ ಕಾರ್ಯಕ್ರಮವಿತ್ತು. ತಮ್ಮ ಭಾವನೆಗಳನ್ನು ಕೆಲವರು ಕಣ್ಣೀರಿನ ಮೂಲಕ, ಕೆಲವರು ಮುಗುಳ್ನಗೆಯ ಮೂಲಕ ವ್ಯಕ್ತಪಡಿಸುವ ಆ ಅಪೂರ್ವ ಕ್ಷಣಕ್ಕಾಗಿ ಕಾಯುತ್ತಿದ್ದರು. ಕೆಲವರು ಗುರೂಜಿಯವರ ಜೊತೆ ಮಾತನಾಡಿ ಉತ್ತರಗಳನ್ನು ಪಡೆದುಕೊಂಡರು. ಆದರೆ ಪ್ರತಿಯೊಬ್ಬರೂ ಗುರೂಜಿಯವರು ಯಥೇಚ್ಛವಾಗಿ ಕಳುಹಿಸುತ್ತಿದ್ದ ದೈವೀಕ ಚೈತನ್ಯಗಳನ್ನು ಸ್ವೀಕರಿಸಿದರು. ಗುರೂಜಿಯವರ ಒಂದೇ ಒಂದು ಅರ್ಥಗರ್ಭಿತ ನಗು ಅಥವಾ ಪ್ರೀತಿಭರಿತ ಕಣ್ಣೋಟ ಎಲ್ಲರ ಕಷ್ಟಗಳ ಹೊರೆಗಳನ್ನು ಮಂಜಿನಂತೆ ಕರಗಿಸಿದವು.

ಅವರ ಜನ್ಮದಿನದಂದು ಗುರೂಜಿಯವರು ಸ್ವೀಕರಿಸಿದ್ದಕ್ಕಿಂತ ನಮಗೆ ನೀಡಿದ್ದೇ ಹೆಚ್ಚಾಗಿತ್ತು. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

01–05–2011

ಜನರು ಹೊಸ ಪ್ರಶ್ನೆಗಳನ್ನು ಕೇಳುವುದಿಲ್ಲ, ಏಕೆಂದರೆ ಅವರಲ್ಲಿ ಎಲ್ಲ ಪ್ರಶ್ನೆಗಳು ಮುಗಿದು ಹೋಗಿ ಯಾವುದೋ ಒಂದು ಹಂತದಲ್ಲಿ ಸಿಲುಕಿಕೊಂಡಿರುತ್ತಾರೆ. ಕೇವಲ ಒಂದು ಅಥವಾ ಎರಡು ಘಂಟೆಗಳು ಧ್ಯಾನ ಮಾಡುವುದರಲ್ಲಿ ಅಥವಾ ನಮ್ಮ ಎಲ್ಲಾ ಪುಸ್ತಕಗಳನ್ನು ಓದುವುದರಲ್ಲಿ ತೃಪ್ತರಾಗಬೇಡಿ. ಜ್ಞಾನ ಸಾಗರದಷ್ಟಿದೆ. ನೀವು ಹೆಚ್ಚು ಓದಿ, ಹೆಚ್ಚು ಜ್ಞಾನ ಪಡೆದಾಗ ನಿಮ್ಮಲ್ಲಿ ಹೊಸ ಪ್ರಶ್ನೆಗಳು ಉದ್ಭವಿಸುತ್ತವೆ. ನೀವು ಮುಂದಿನ ಹಂತವಲ್ಲದಿದ್ದರೂ ಸ್ವಲ್ಪ ಉನ್ನತ ಮಟ್ಟಕ್ಕೆ ತಲುಪಿದಾಗ ನಿಮಗೆ ಹೊಸ ಅನುಭವಗಳಾಗುತ್ತವೆ, ಹೊಸ ಪ್ರಶ್ನೆಗಳು ಮತ್ತು ಸಂದೇಹಗಳು ಹುಟ್ಟಿಕೊಳ್ಳುತ್ತವೆ. ಆ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಸಿಕ್ಕಿದಾಗ, ನೀವು ಹೊಸ ಅಥವಾ ಮುಂದಿನ ಮಟ್ಟಕ್ಕೆ ಪರಿವರ್ತಿತರಾಗಬೇಕು. ಈ ರೀತಿ ನೀವು ಆಧ್ಯಾತ್ಮಿಕವಾಗಿ ಬೆಳೆಯಬೇಕು.

ಆತ್ಮ, ಬೆಳಕಿನ ಒಂದು ಸಣ್ಣ ಕಣ; ಅದಕ್ಕೆ ಗಾತ್ರವಾಗಲಿ, ತೂಕವಾಗಲಿ ಇಲ್ಲ. ಆತ್ಮವು ಸೂಕ್ಷ್ಮ ಶರೀರದಲ್ಲಿರುವ ಆನಂದಮಯಕೋಶದಲ್ಲಿ ಇರುತ್ತದೆ. ಸಾವಿನ ನಂತರ, ಆತ್ಮ ದೇಹದಿಂದ ತನ್ನಷ್ಟಕ್ಕೇ ಹೊರ ಬರುವುದಿಲ್ಲ. ಒಬ್ಬ ಮಾರ್ಗದರ್ಶಕನ ಸಹಾಯ ಮತ್ತು ಮಾರ್ಗದರ್ಶನದಿಂದ ಆತ್ಮ ವಿಶ್ರಾಂತಿಯ ಸ್ಥಳಕ್ಕೆ ಒಯ್ಯಲ್ಪಡುತ್ತದೆ. ಸಾವಿನ ಸಮಯದಲ್ಲಿ ಸೂಕ್ಷ್ಮ ಶರೀರ ಪ್ರತ್ಯೇಕವಾಗುತ್ತದೆ. ಬೆಳ್ಳಿಯ ತಂತು ಸಂಪರ್ಕದಲ್ಲಿ ಇರುವವರೆಗೂ ಸೂಕ್ಷ್ಮ ಶರೀರ ಎಲ್ಲಾ ರೀತಿಯಲ್ಲಿ ಭೌತಿಕಶರೀರವನ್ನು ಹೋಲುತ್ತದೆ. ಸಾವಿನ ನಂತರ ಅದು ಒಂದು ಸಣ್ಣ ವೃತ್ತಾಕಾರದ ಚೆಂಡಿನಂತಾಗುತ್ತದೆ.

ಒಬ್ಬ ವಿದ್ಯಾರ್ಥಿ ಪತ್ರ ಬರೆದು, "ನನ್ನ ಗುರುವನ್ನು ನಾನು ಯಾವಾಗ ಭೇಟಿಯಾಗುತ್ತೇನೆ?" ಎಂದು ಪ್ರಶ್ನೆ ಕೇಳಿದರು. ನನಗೆ ಕೋಪವೂ ಬರಲಿಲ್ಲ, ನೋವೂ ಆಗಲಿಲ್ಲ. ಮಾನವ ಗುರು ಒಬ್ಬ ಮಾರ್ಗದರ್ಶಕ. ನಿಜವಾದ ಗುರು ಎಂದರೆ ದೇವರು. ನಾನು ಹೃತ್ಪೂರ್ವಕವಾಗಿ ಮಾರ್ಗದರ್ಶನ ಮಾಡುತ್ತೇನೆ, ಚೈತನ್ಯಗಳನ್ನು ನೀಡುತ್ತೇನೆ. ನನ್ನ ಕಡೆಯಿಂದ ಯಾವ ಅಂತರವೂ ಇಲ್ಲ. ನೀವು ಒಬ್ಬ ವಿದ್ಯಾರ್ಥಿಯೇ, ಶಿಷ್ಯರೇ ಅಥವಾ ಒಬ್ಬ ಅನುಯಾಯಿಯೇ ಎಂಬ ಸಂಬಂಧವನ್ನು ಸ್ಪಷ್ಟಪಡಿಸಿಕೊಳ್ಳಬೇಕು.

'ದಿ ಸ್ಪೀಕಿಂಗ್ ಟ್ರೀ' ವೆಬ್‌ಸೈಟ್‌ನ ಆಧ್ಯಾತ್ಮಿಕ ಮಾಸ್ಟರ್‌ಗಳ ಸಾಲಿನಲ್ಲಿ ನನ್ನ ಹೆಸರನ್ನು ಸೇರಿಸಲಾಗಿದೆ. ಅದರಲ್ಲಿ ನಾವು ನೋಡಿದಾಗ ನನಗೆ 240 ಅನುಯಾಯಿಗಳಿದ್ದಾರೆ, ಇವರಲ್ಲಿ ಕೆಲವರು ಮಾತ್ರ ನನ್ನ ವಿದ್ಯಾರ್ಥಿಗಳು ಎಂದು ತಿಳಿದು ಬಂತು. ಇದರಿಂದ ನಮ್ಮ ಎಲ್ಲಾ ಸಾಧಕರು ನನ್ನ ಅನುಯಾಯಿಗಳಲ್ಲ ಎಂಬ ಅರಿವು ನನ್ನಲ್ಲಿ ಉಂಟಾಯಿತು!

ಸದಾ ಮನಸ್ಸನ್ನು ಕಾಡಿಸುವ ನಕಾರಾತ್ಮಕ ಚೈತನ್ಯಗಳನ್ನು ದೂರವಿಡಲು ಬೆಳಕನ್ನು ನಮ್ಮೊಳಗೆ ಹೊಂದಿರಬೇಕು ಮತ್ತು ಅದನ್ನು ಹರಡಬೇಕು. ಬೆಳಕಿಗಿಂತ ಶಕ್ತಿಯುತವಾದುದು ಯಾವುದೂ ಇಲ್ಲ. ಬೆಳಕು ಸ್ವತಃ ದೇವರು. ಇಂಥ ಸರಳ ಸತ್ಯಗಳನ್ನು ಅರ್ಥಮಾಡಿಕೊಂಡರೆ, ನೀವು ತಾಂತ್ರಿಕರು ಅಥವಾ ಬೇರೆ ಯಾರ ಬಳಿಗೂ ಹೋಗುವುದಿಲ್ಲ.

ಇನ್ನು ಮುಂದೆ ನಾವು ಹೆಚ್ಚುಹೆಚ್ಚು ಚಾನಲಿಂಗ್ ಮಾಡಬೇಕು, ಹೆಚ್ಚು ಶುಚಿಗೊಳಿಸಬೇಕಾಗಿದೆ ಮತ್ತು ಹೆಚ್ಚು ಪುನರ್ನಿರ್ಮಾಣ ಮಾಡಬೇಕಾಗಿದೆ. ಇಂಥ ವಿಷಯಗಳಿಂದ ಮಾತ್ರ ಹೊಸಯುಗವನ್ನು ಕಟ್ಟಲಾಗುತ್ತದೆ.

08–05–2011

ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಲು ಮತ್ತು ವಿಶೇಷವಾಗಿ 2012ರ ಘಟನೆಗಳನ್ನು ಎದುರಿಸಲು ಧ್ಯಾನಗಳು ಸಾಲದು. ಭಾನುವಾರದ ಉಪನ್ಯಾಸಗಳನ್ನು ತಪ್ಪಿಸಿಕೊಳ್ಳಬೇಡಿ, ವಾರ್ತಾಪತ್ರಿಕೆಗಳನ್ನು ಓದಿ, ನಾವು ಪ್ರಕಟಿಸಿದ ಪುಸ್ತಕಗಳನ್ನು, ಅದರಲ್ಲಿಯೂ ವಿಶೇಷವಾಗಿ ಅಧ್ಯಯನ ಕೇಂದ್ರದ ಪುಸ್ತಕಗಳನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಳ್ಳಿ. ಅವುಗಳಲ್ಲಿ ಬಹಳ ಸರಳ, ಸ್ಪಷ್ಟ, ಸುಂದರ, ಪ್ರಮಾಣಿತ ಮತ್ತು ನೇರವಾದ ಮಾಹಿತಿ ಇದೆ. ನಮ್ಮ ಸುತ್ತಮುತ್ತ ಏನಾಗುತ್ತಿದೆ ಎಂಬುದನ್ನು ತಿಳಿಯುವುದಕ್ಕೆ ಕುರುಡರೂ, ಕಿವುಡರೂ ಆಗಬಾರದು. ನಾವು ಎಷ್ಟು ಸಾಧ್ಯವೋ ಅಷ್ಟೂ ಜ್ಞಾನವನ್ನು ಸಂಗ್ರಹಿಸಬೇಕು, ಅರ್ಥೈಸಿಕೊಳ್ಳಬೇಕು, ಅಲ್ಲದೇ ಧ್ಯಾನ ಮಾಡಿ ಸಕಾರಾತ್ಮಕರಾಗಬೇಕು.

ದೇವರು, ಪ್ರಜ್ಞೆ, ಚೈತನ್ಯಶಕ್ತಿ ಈ ಎಲ್ಲ ಪದಗಳ ಅರ್ಥ ಒಂದೇ ಆಗಿದೆಯೇ ಎಂದು ಒಬ್ಬ ವ್ಯಕ್ತಿ ಕೇಳಿದರು. ಇದು ತುಂಬಾ ವಿಷಾದನೀಯ. ಜನರು ದೇವರನ್ನು ಕೇವಲ ಚೈತನ್ಯಶಕ್ತಿ, ವಿದ್ಯುಚ್ಛಕ್ತಿ ಅಥವಾ ಉಷ್ಣ ಎಂದು ತಿಳಿದಿದ್ದಾರೆ. ಅವನನ್ನು ಸಂಪೂರ್ಣವಾಗಿ ಅರಿಯುವುದು ಕಷ್ಟ. ದೇವರು ಅತ್ಯುನ್ನತ ಬುದ್ಧಿಶಕ್ತಿ. ದೇವರು ಪ್ರೀತಿಯ ಸಾಕಾರರೂಪ. ಇಡೀ ಸೃಷ್ಟಿ, ಪ್ರಜ್ಞೆ ಮತ್ತು ಚೈತನ್ಯಶಕ್ತಿ ದೇವರಿಂದ ಬಂದಿದೆ. ದೇವರು ನಾವು ತಿಳಿದಿರುವುದಕ್ಕಿಂತಲೂ ಇನ್ನೂ ಹೆಚ್ಚು.

ಸಂಸ್ಕೃತದಲ್ಲಿ ಎರಡು ರೀತಿಯ 'ಧಿ'ಗಳಿವೆ– 'ದಿ' ಮತ್ತು 'ಧಿ'. 'ಸಮಾಧಿ' ಪದವನ್ನು ಬರೆಯುವಾಗ ನಾವು 'ಧಿ' ಮಹಾಪ್ರಾಣವನ್ನು ಬರೆಯುತ್ತೇವೆ. ನನ್ನ ಗುರು 'ದಿ' ಅಲ್ಪಪ್ರಾಣ ಬಳಸಬೇಕೆಂದು ಹೇಳುತ್ತಾರೆ. ಸಂಸ್ಕೃತದಲ್ಲಿ 'ಸಮ' ಎಂದರೆ ಸಮಾನ, 'ಆದಿ' ಎಂದರೆ ಪ್ರಾರಂಭ ಎಂದರ್ಥ. 'ಸಮಾದಿ' ಎಂದರೆ ಪ್ರಾರಂಭದಲ್ಲಿ, ದೇವರು ಮತ್ತು ಆತ್ಮಗಳಾದ ನಾವು ಸಮಾನರಾಗಿದ್ದೆವು. ಅವನು ಬೆಳಕಾಗಿದ್ದ ಮತ್ತು ನಾವೂ ಬೆಳಕಾಗಿದ್ದೆವು. ಈ ಅರ್ಥವನ್ನು ಋಷಿಗಳು ನಮಗೆ ನೀಡಿದ್ದಾರೆ.

ಸಮಾದಿಯನ್ನು ಅನುಭವಿಸಿದಾಗ ನಾವು ಬೆಳಕಾಗುತ್ತೇವೆ, ನಾವು ಒಂದಾಗುತ್ತೇವೆ ಅಥವಾ ಸರಿಸಮಾನ ಆಗುತ್ತೇವೆ. ನಾವು ಧ್ಯಾನ ಮಾಡಿದಾಗ ಮಾತ್ರ ಸಮಾದಿ ಸಾಧ್ಯ. ನಾವು ವಿಸ್ತಾರಗೊಂಡು ಬೆಳಕನ್ನು ಹೊಂದಿದಾಗ ಅಥವಾ ಪರಿಶುದ್ಧತೆ, ಶಾಂತಿ, ಪ್ರೀತಿ ಎಲ್ಲವನ್ನು ಹೊಂದಿರುವ ಬೆಳಕನ್ನು ಅನುಭವಿಸಿದಾಗ ಸಮಾದಿಯನ್ನು ಅನುಭವಿಸುತ್ತೇವೆ. ನಾವು ದೈವತ್ವದ ಯಾವುದಾದರೂ ಒಂದು ಅಂಶದೊಂದಿಗೆ ಹೊಂದಿಸಿಕೊಂಡಾಗ, ನಾವು ಸಮಾದಿಯನ್ನು ಅನುಭವಿಸುತ್ತಿದ್ದೇವೆ ಎಂದು ಋಷಿಗಳು ಹೇಳುತ್ತಾರೆ.

ಋಷಿಗಳು ಪ್ರತಿಯೊಬ್ಬರನ್ನು ಪರೀಕ್ಷಿಸುತ್ತಾರೆ, ಮೌಲ್ಯಮಾಪನ ಮಾಡುತ್ತಾರೆ, ಉನ್ನತ ಹಂತಕ್ಕೆ ಏರಿಸುತ್ತಾರೆ ಅಥವಾ ಅದೇ ಹಂತದಲ್ಲಿಯೇ ಇರಿಸುತ್ತಾರೆ. ಆದರೆ ಯಾವುದೇ ಸಂದರ್ಭದಲ್ಲಿ ಋಷಿಗಳು ನಮ್ಮನ್ನು ಕೆಳಹಂತಕ್ಕೆ ತಳ್ಳುವುದಿಲ್ಲ, ನಾವೇ ಕೆಳಗೆ ಬೀಳುತ್ತೇವೆ. ನಮ್ಮನ್ನು ನಿರ್ವಹಿಸುವುದರಲ್ಲಿ, ಮೌಲ್ಯ ನಿರ್ಧಾರ ಮಾಡುವುದರಲ್ಲಿ, ಹಾಗೆಯೇ ಸಹಾಯ ಮಾಡುವುದರಲ್ಲಿ, ತೊಂದರೆಗಳನ್ನು ನಿವಾರಿಸುವುದರಲ್ಲಿ, ಅಗತ್ಯ ಬಿದ್ದಲ್ಲಿ ಮೇಲೆತ್ತುವುದರಲ್ಲಿ ಅನೇಕರು ನಿರತರಾಗಿದ್ದಾರೆ. ಎಲ್ಲ ವ್ಯಕ್ತಿಗಳನ್ನು, ಸಾಧಕರನ್ನು ಮಾತ್ರವಲ್ಲದೆ ಗುರುಗಳನ್ನು ಕೂಡಾ ಮೌಲ್ಯಮಾಪನ ಮಾಡುತ್ತಾರೆ. ಈ ಕಾರ್ಯದ ಮೇಲ್ವಿಚಾರಣೆ ಮಾಡಲು ನಮ್ಮ ಹಿಮಾಲಯದ ಹೆಡ್‌ಕ್ವಾರ್ಟರ್ಸ್‌ನಲ್ಲಿ ಋಷಿಗಳೊಬ್ಬರು ಕುಳಿತಿದ್ದಾರೆ.

ಆಧ್ಯಾತ್ಮಿಕತೆ ಎಂದರೆ ಒಳ್ಳೆಯತನ, ಆಧ್ಯಾತ್ಮಿಕತೆ ಎಂದರೆ ಪ್ರಾಮಾಣಿಕತೆ. ನಾವು ಧ್ಯಾನ ಮಾಡಬೇಕಾಗಿಲ್ಲ ಅಥವಾ ಋಷಿಗಳನ್ನು ಸಂಪರ್ಕಿಸಬೇಕಾಗಿಲ್ಲ. ನಾವು ಪರಿಶುದ್ಧರಾಗಿದ್ದರೆ, ಋಷಿಗಳೇ ಬಂದು ನಮ್ಮನ್ನು ಸಂಪರ್ಕಿಸುತ್ತಾರೆ. ಇಂಥ ಸತ್ಯಗಳನ್ನು ನೀವು ಚೆನ್ನಾಗಿ ತಿಳಿಯಬೇಕಾಗಿದೆ. ಪ್ರಪಂಚವನ್ನು ಕುತೂಹಲದಿಂದ ನೋಡಿ. ನಿಮ್ಮ ಕಣ್ಣು ಮತ್ತು ಕಿವಿಗಳನ್ನು ತೆರೆದಿಡಿ, ಹೃದಯವನ್ನು ತೆರೆದಿಡಿ ಮತ್ತು ಪರಿಶುದ್ಧವಾಗಿಟ್ಟುಕೊಳ್ಳಿ.

15–05–2011

ಆರಾಧನೆಯಲ್ಲಿ ದೇವರು ಮತ್ತು ನಮ್ಮ ನಡುವೆ ಅಂತರವಿದ್ದೇ ಇರುತ್ತದೆ, ಅಲ್ಲಿ ಯಾವುದೇ ಸಂಪರ್ಕವಿರುವುದಿಲ್ಲ. ಧ್ಯಾನದಲ್ಲಾದರೆ ಅವನನ್ನು

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಅನುಭವಿಸುತ್ತೇವೆ. ಅಂತರ ಮಾಯವಾಗಿ ನಾವೇ ಅವನಾಗುತ್ತೇವೆ. ಪರಿವರ್ತನೆ ಬಹಳ ಮುಖ್ಯ. ಆರಾಧಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಅದರಾಚೆಗೆ ನಾವು ಹೋಗಬೇಕು.

---

ನಾವು ಸಾಧನೆಯಲ್ಲಿ ಮುಂದುವರಿದಂತೆ, ಬೇರೆಬೇರೆ ಜನರು ವೈರಾಗ್ಯ, ಆತಂಕ ಅಥವಾ ಜೀವನದ ಬಗ್ಗೆ ಸ್ಪಷ್ಟ ಧೋರಣೆ ಇಲ್ಲದಿರುವುದು ಮತ್ತು ದೇವರಂಥ ವಿವಿಧ ರೀತಿಯ ಅನುಭವಗಳನ್ನು ಪಡೆಯುತ್ತಾರೆ. ಇವೆಲ್ಲಾ ಸಹಜ, ಗಾಬರಿಗೊಳ್ಳಬೇಡಿ. ನಿಮಗೆ ಸಂದೇಹವೇನಾದರೂ ಇದ್ದರೆ, ನಿಮ್ಮ ಅನುಭವ ಅಥವಾ ತೊಂದರೆಯನ್ನು ನನಗೆ ತಿಳಿಸಿ.

---

ಸಮಚಿತ್ತದಿಂದ ಇರುವುದು ಬಹಳ ಮುಖ್ಯ. ಅತಿರೇಕದ ಭಾವನೆಗಳು ಒಳ್ಳೆಯದಲ್ಲ, ಆದರೆ ಗಾಢವಾದ ಭಾವನೆಗಳು, ಪ್ರೀತಿ ಮತ್ತು ಭಕ್ತಿ ಒಳ್ಳೆಯದು.

ನಮ್ಮಲ್ಲಿ ಮೂರು ಕವಚಗಳಿವೆ: ಎಲ್ಲ ಧ್ಯಾನಿಗಳಿಗೆ ಒಂದು ಸಾಮಾನ್ಯ ಕವಚ ಕೊಡಲಾಗುತ್ತದೆ. ಶಂಬಲ ಕವಚವನ್ನು ಶಂಬಲ ಗ್ರೂಪ್‌ನವರಿಗೆ ಮತ್ತು ರಾ-ಗ್ರೂಪ್‌ನಲ್ಲಿರುವವರಿಗೆ ಮತ್ತೊಂದು ಕವಚವನ್ನು ನೀಡಲಾಗುತ್ತದೆ. ಅಪ್ರಜ್ಞಾಪೂರ್ವಕವಾಗಿ ಅಥವಾ ತಿಳಿಯದೇ ನಾವು ನಕಾರಾತ್ಮಕ ಆಲೋಚನೆಗಳನ್ನು ಬಹಳ ಕಾಲ ನೆಲೆಸಿರಲು ಅವಕಾಶ ಕೊಟ್ಟರೆ, ಅವು, ಮೂರೂ ಕವಚಗಳಿಗೆ ಹಾನಿಯನ್ನುಂಟು ಮಾಡುತ್ತವೆ. ನಾವು ಕಪ್ಪು ಚೈತನ್ಯಗಳಿಗೆ ಆಹ್ವಾನ ಕೊಟ್ಟರೆ, ಅವು ನಮ್ಮನ್ನು ಪ್ರವೇಶಿಸಿ, ನಮ್ಮೊಡನೆ ಇದ್ದು ಅವುಗಳಿಗೆ ಬೇಕೆನಿಸಿದಷ್ಟು ಹಾನಿಯುಂಟು ಮಾಡುತ್ತವೆ

---

ಏಳನೇ ತರಗತಿಯ ವಿದ್ಯಾರ್ಥಿಯೊಬ್ಬ, 'ನನಗೆ ತೊಂದರೆಯಾದಾಗಲೆಲ್ಲಾ ನಾನು ಬೆಳಕನ್ನು ಚಾನಲ್ ಮಾಡುತ್ತೇನೆ' ಎಂದು ಪತ್ರ ಬರೆದ. ಒಬ್ಬ ಚಿಕ್ಕ ಶಾಲಾ ಹುಡುಗ ಹಿರಿಯರಿಗೆ ಸ್ಫೂರ್ತಿಯಾಗಬಹುದು!

---

ಈ ಬಾರಿ ಜೂನ್ 2ರಂದು ಮೊದಲುಗೊಂಡು ಮೂರು ಗ್ರಹಣಗಳಿವೆ. ಸಾಮಾನ್ಯವಾಗಿ, ಗ್ರಹಣಕ್ಕೆ ಮೊದಲು 48 ದಿನಗಳ ಮುಂಚೆ ಅದರ ಪ್ರಭಾವ ಪ್ರಾರಂಭವಾಗುತ್ತದೆ. ಇದು ಗ್ರಹಣದ ನಂತರ 48 ದಿನಗಳವರೆಗೆ ಇರುತ್ತದೆ. ಅತ್ಯಂತ ದೊಡ್ಡ ಬದಲಾವಣೆಗಳು ರಾಷ್ಟ್ರೀಯ ಮಟ್ಟದಲ್ಲಿ ಆದಂತೆಯೇ ಉನ್ನತಮಟ್ಟಗಳಲ್ಲಿ ಆಯಿತು. ವ್ಯಕ್ತಿಗಳಲ್ಲಿ ಆಗಿರುವ ಬದಲಾವಣೆಗಳನ್ನು ನೋಡಲು ನನಗೆ ತುಂಬ ಸಂತೋಷವಾಗುತ್ತದೆ. ನಾನು ಹೆಚ್ಚು ಬೆಳಕು ಹೊರ ಬರುತ್ತಿರುವುದನ್ನು ನೋಡುತ್ತಿದ್ದೇನೆ. ಇಷ್ಟು ವರ್ಷಗಳ ಪ್ರಯತ್ನ ಸಾರ್ಥಕವೆನಿಸುತ್ತದೆ. ಅಪರೂಪಕ್ಕೆ ತದ್ವಿರುದ್ಧ ಘಟನೆಗಳು ಸಂಭವಿಸುತ್ತಿವೆ. ನಾನು ಅವರನ್ನು ಭೌತಿಕ ಮತ್ತು ಸೂಕ್ಷ್ಮ ಮಟ್ಟದಲ್ಲಿ ಸುಗಮ ಹಾದಿಗೆ ಮತ್ತೆ ತರಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತೇನೆ. ನಿಮ್ಮಲ್ಲಿ ಪ್ರಳಯ ಉಂಟಾಗಲು ಅವಕಾಶ ಮಾಡಿಕೊಡಿ. ನಾವು ಬದಲಾದಾಗ ಪ್ರಪಂಚವೂ ಬದಲಾಗುತ್ತದೆ.

---

ಪ್ರಪಂಚದಾದ್ಯಂತ ಲೈಟ್ ಚಾನಲಿಂಗ್ ತೆಗೆದುಕೊಂಡಿರುವ 1,44,000 ಋಷಿಗಳ ಕೇಂದ್ರಗಳಿವೆ. ಚಾನಲಿಂಗ್ ಪ್ರಳಯ ಪ್ರಕ್ರಿಯೆಗೆ ಎಲ್ಲ ರೀತಿಯಿಂದ ಸಹಾಯಮಾಡುತ್ತಿದೆ. ಇನ್ನು ಮುಂದೆ ವೈಯಕ್ತಿಕ ಅಥವಾ ದೊಡ್ಡ ಮಟ್ಟದಲ್ಲಿ ಆಗುವ ಯಾವುದೇ ಬದಲಾವಣೆ ಒಳ್ಳೆಯದಕ್ಕೆ ಆಗಿರುತ್ತದೆ.

ಎಲ್ಲ ಧ್ಯಾನಿಗಳು ಮತ್ತು ಬೆಳಕಿನ ಕಾರ್ಯಕರ್ತರು ಈ ಭೂಮಿಯನ್ನು ಹೆಚ್ಚಿನ ಪ್ರಮಾಣದ ಹಾನಿಯಿಂದ ತಪ್ಪಿಸಿ, ಹೊಸಯುಗಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡುವುದರಿಂದ ಅಪಾರ ಹಾನಿಯನ್ನು ತಪ್ಪಿಸಬಹುದು. ಹೆಚ್ಚು ಜನರು ಬೆಳಕಾಗಬೇಕಾಗಿದೆ. ಕಳೆದ ಕಾಲಚಕ್ರದಲ್ಲಿ ಈ ಭೂಮಿ ಫೋಟಾನ್ ಬೆಲ್ಟ್ ಪ್ರವೇಶ ಮಾಡಿದಾಗ ಇದ್ದ ಜನರಿಗಿಂತ, ಈಗ ನಾವು ಹೆಚ್ಚಿನ ಸಂಖ್ಯೆಯಲ್ಲಿ ಇದ್ದೇವೆ.

**22-05-2011**

ಒಬ್ಬ ವ್ಯಕ್ತಿ ಭವಿಷ್ಯ ಹೇಳಿದಂತೆ ನಿನ್ನೆಯ ದಿನ ಪ್ರಪಂಚ ಕೊನೆಯಾಗಲಿಲ್ಲ, ಆದರೆ ಒಂದು ಬದಲಾವಣೆಯಾಯಿತು, ಹೊಸ ಚೈತನ್ಯಗಳು ಬಿಡುಗಡೆಯಾದವು. ಜನರು 2012ನ್ನು ಇನ್ನೊಂದು ಭವಿಷ್ಯವಾಣಿ ಎಂದು ತಿಳಿದಿದ್ದಾರೆ. ವಾಸ್ತವವೇ ಬೇರೆ. ಅದು ಸಂಪೂರ್ಣವಾಗಿ ಭಿನ್ನ.

---

ಹಿಂತಿರುಗಿ ನೋಡಿದಾಗ, ನನ್ನ ಕಾರ್ಯವನ್ನು ಮಾಡಿದ್ದೇನೆ ಎನಿಸಿದರೂ ನನಗೆ ಸಂಪೂರ್ಣವಾಗಿ ತೃಪ್ತಿಯಿಲ್ಲ. ಋಷಿಗಳ ಕಾರ್ಯ ಎಂದಿಗೂ ಮುಗಿಯದು. ಅದು ಮುಂದುವರಿಯುತ್ತದೆ. ನನ್ನ ಕಾರ್ಯ ಕೂಡಾ ನನ್ನ ಕೊನೆಯ ಉಸಿರಿನವರೆಗೂ ಮುಂದುವರಿಯುತ್ತದೆ.

ಅಮರರ ಪರಂಪರೆಯನ್ನು ಮುಂದುವರಿಸಿರುವುದರಿಂದ, ನನ್ನ ಕೆಲಸದ ಬಗ್ಗೆ ನನಗೆ ಸಂತೋಷವಾಗಿದೆ. ನಾವು ಕೆಲವು ವಿಷಯಗಳನ್ನು ಹೊಸದಾಗಿ ಮರು ವ್ಯಾಖ್ಯಾನಿಸಿದ್ದೇವೆ, ಅರ್ಥಗಳನ್ನು ವಿಸ್ತರಿಸಿದ್ದೇವೆ ಮತ್ತು ನಮ್ಮ ಮಾರ್ಗವನ್ನು ಸ್ಪಷ್ಟಪಡಿಸಿದ್ದೇವೆ. ಈಗ ನಾವು ಒಂದು ವಿಶಿಷ್ಟವಾದ ಮಾರ್ಗ, ಪಠ್ಯಕ್ರಮವನ್ನು ಹೊಂದಿದ್ದೇವೆ ಮತ್ತು ಎಲ್ಲವೂ ಬಹಳ ಸ್ಪಷ್ಟವಾಗಿದೆ.

ನನ್ನ ಗುರು ಅತ್ಯುನ್ನತ ಮತ್ತು ಹೊಸ ಜ್ಞಾನವನ್ನು ನೀಡಿದ್ದಾರೆ, ಅವು ಇಲ್ಲಿ ಪ್ರಾಥಮಿಕ, ಮೂಲ ಪಠ್ಯವಾಗಿವೆ. ನಾವು ಅನೇಕ ಕೇಂದ್ರಗಳನ್ನು ಮತ್ತು ನಂತರ ಅಂತರ್-ಮಾನಸವನ್ನು ಸ್ಥಾಪಿಸಿದ್ದೇವೆ. ಇಲ್ಲಿ ಋಷಿಗಳು ನೆಲೆಸಿದ್ದಾರೆ ಮತ್ತು ವಿವಿಧ ರೀತಿಯ ಚೈತನ್ಯಗಳನ್ನು, ಜ್ಞಾನವನ್ನು ನಮಗೆ ಮತ್ತು ಭವಿಷ್ಯದ ಜನಾಂಗಕ್ಕೆ ಲಭ್ಯವಾಗುವಂತೆ ಸೂಕ್ಷ್ಮ ಘಟಕಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ.

ಅತ್ಯಂತ ಸಂತೋಷದಾಯಕ ಕೆಲಸವೆಂದರೆ, ಸ್ತ್ರೀಯರು ಗಾಯತ್ರಿ ಮಂತ್ರವನ್ನು ಪುನರುಚ್ಚರಿಸಬಾರದು ಎಂಬಂತಹ ಅನೇಕ ವಿಕೃತ ಅಸಂಬದ್ಧ ವಿಷಯಗಳನ್ನು ಹೋಗಲಾಡಿಸುವ ಕಾರ್ಯ ಮಾಡಿರುವುದು. ನಮ್ಮ ಪ್ರಶ್ನೆಗಳಿಗೆ ಋಷಿಗಳಿಂದ ಸ್ಪಷ್ಟ, ಚಿಕ್ಕ, ನೇರ ಮತ್ತು ಸತ್ಯವಾದ ಉತ್ತರಗಳನ್ನು ಪಡೆಯುತ್ತೇವೆ. ಋಷಿಗಳ ಕಾರ್ಯ ಮುಂದುವರಿಯಲು ಬೇಕಾದ ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ.

---

ನನ್ನ ಕಾರ್ಯದ ಮುಂದಿನ ಹಂತ ಈಗ ಪ್ರಾರಂಭವಾಗುತ್ತಿದೆ. ಅದರ ಮುಖ್ಯವಾದ ಭಾಗವೆಂದರೆ 2012ರ ಘಟನೆಗಳಿಗೆ ಮತ್ತು 2012ರ ಆಚೆಗೆ ಸಂಬಂಧಿಸಿದ ಹೊಸ ಜ್ಞಾನವನ್ನು ಕೆಳತರುವುದು. ಈ ಕಾರ್ಯವನ್ನು ಮಾಡಲು ನಾನು ಹೆಚ್ಚು ಏಕಾಂತತೆಯಲ್ಲಿರಬೇಕು. "ನಾವು ಜವಾಬ್ದಾರಿಗಳನ್ನು ಬಿಟ್ಟುಕೊಡದ ಹೊರತು, ಮುಂದೆ ಚಲಿಸಲಾಗುವುದಿಲ್ಲ."

ನಾವು ಸಾಹಿತ್ಯವನ್ನು ಓದದಿದ್ದರೆ ಮತ್ತು ಸಂಗೀತವನ್ನು ಕೇಳದಿದ್ದರೆ ಆ ಅನುಭವವನ್ನು ಕಳೆದುಕೊಳ್ಳುತ್ತೇವೆ. ಅಷ್ಟೇ ಅಲ್ಲದೆ ನಮ್ಮ ಆಲೋಚನೆ ಮತ್ತು ಭಾವನೆಗಳಲ್ಲಿ ಅವುಗಳಿಂದುಂಟಾಗುವ ಸಂಸ್ಕರಣೆಯಿಂದ ವಂಚಿತರಾಗುತ್ತೇವೆ.

ನನ್ನ ಜೀವನದಲ್ಲಿ ಅಮರರ ಪಾತ್ರ ಅತ್ಯಂತ ಮಹತ್ವವಾದದ್ದು. ಅವರು ನನಗೆ ಪರಿಚಯಿಸಿದ ಅನೇಕ ಪ್ರಪಂಚಗಳ ಬೆಳಕು ಮತ್ತು ಪ್ರೀತಿಯನ್ನು ನಾನು ಅನುಭವಿಸುತ್ತೇನೆ ಮತ್ತು ಅವು ನಿಮಗೆಲ್ಲರಿಗೂ ದೊರಕುವಂತೆ ಮಾಡುವುದಕ್ಕೆ ಇಷ್ಟವಾಗುತ್ತದೆ. ನಾವು ಹೊಸಯುಗವನ್ನು ಪ್ರೀತಿ ಮತ್ತು ಬೆಳಕಿನಿಂದ ಮಾತ್ರ ನಿರ್ಮಾಣ ಮಾಡಬಹುದು, 2012ರನ್ನು ಪ್ರೀತಿ ಮತ್ತು ಬೆಳಕಿನಿಂದ ಮಾತ್ರ ದಾಟಬಹುದು. ಇದನ್ನು ಈಗ ನಂಬಲು ಕಷ್ಟವೆನಿಸಬಹುದು ಆದರೆ ನಾವೆಲ್ಲ ಪ್ರೀತಿ ಮತ್ತು ಬೆಳಕನ್ನು ಅನುಭವಿಸಬಹುದು.

ನನಗಿರುವ ಒಂದೇ ಒಂದು ಅಜೆಂಡಾ ಎಂದರೆ ಋಷಿಗಳ ಅಜೆಂಡಾ. ಋಷಿಗಳು ಮತ್ತು ಅವರ ಕಾರ್ಯವೇ ನನ್ನ ಗುರಿ. ಪ್ರಪಂಚಕ್ಕಾಗಿ ನಾನು ಕನಸು ಕಾಣುತ್ತೇನೆ. ನೀವೆಲ್ಲ ನನ್ನ ಕನಸಿನ ಭಾಗ; ನೀವೆಲ್ಲ ನನ್ನ ಕಾಣಿಕೆಗಳು ಮತ್ತು ಪರೀಕ್ಷೆಗಳು ಕೂಡಾ. ಪರೀಕ್ಷೆಗಳು ನಮ್ಮ ಬೆಳವಣಿಗೆಯ ಭಾಗ.

---

ನೀವು ಆಧ್ಯಾತ್ಮಿಕರಾದರೆ ನನಗೆ ಬಹಳ ಸಂತೋಷ. ನೀವು ಒಳ್ಳೆಯವರಾಗಿ, ಪ್ರಾಮಾಣಿಕರಾಗಿ ಮತ್ತು ಸರಳವಾಗಿರಿ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಬರೆದ ಪತ್ರಗಳ ಆಯ್ದ ಭಾಗಗಳು

(ಸಂ: ಶೋಭಾ ಕೆ.ರಾವ್; ಅನು: ಸುಧಾಕರ್)

ನನ್ನ ಯಾವುದೇ ತಪ್ಪಿಲ್ಲದಿದ್ದರೂ, ನನ್ನನ್ನು ತುಂಬ ಅಸಂವೇದಿಯಾಗಿ ನಡೆಸಿಕೊಂಡ ಕಠಿಣ ಸಂದರ್ಭವೊಂದನ್ನು ವಾರದ ಕೊನೆಯಲ್ಲಿ ಎದುರಿಸಬೇಕಾಯಿತು. ಗುರೂಜಿಯವರ ಉಪದೇಶಗಳು ಮತ್ತು ಅವರ ವ್ಯಕ್ತಿತ್ವದ ಕಡೆಗೆ ನನ್ನ ಆಲೋಚನೆ ಹೋಯಿತು. ಆಗ ನಾನು, ಯಾವುದೇ ಸಂದರ್ಭವಾದರೂ ಅದನ್ನು ಅತ್ಯಂತ ಸಮಾಧಾನದಿಂದ ಮತ್ತು ಸಕಾರಾತ್ಮಕವಾಗಿ ಎದುರಿಸುವುದಾಗಿ ನನಗೆ ನಾನೇ ಮಾತು ಕೊಟ್ಟೆ. ಈಗ, ನೆಮ್ಮದಿಯನ್ನು ಅರಸುತ್ತಿಲ್ಲ, ನೆಮ್ಮದಿಯಲ್ಲಿಯೇ ಜೀವಿಸುತ್ತಿದ್ದೇನೆ! ಎಲ್ಲರಲ್ಲಿ ದೈವೀ ಗುಣಗಳನ್ನು ಹೊರತರುವುದು ಹೇಗೆಂದು ನನಗೆ ತೋರಿಸಿಕೊಟ್ಟಿದ್ದಕ್ಕಾಗಿ ಮತ್ತು ಈ ಗುಣಗಳನ್ನು ನಾನು ಹೊರತರಲು ಸಹಾಯಮಾಡಿದ್ದಕ್ಕಾಗಿ ಗುರೂಜಿಯವರಿಗೆ ವಂದನೆಗಳು.

– ಗೀತಾ ಜೋಶಿ

ನಾನು ತುಂಬ ಸಂತೋಷದಿಂದಿದ್ದೇನೆ ಮತ್ತು ದೈವೀಕೃಪೆಯಿಂದಾಗಿ ಈ ಮಾರ್ಗದಲ್ಲಿದ್ದೇನೆ. ನಾನು ಈ ಹಿಂದೆ ಅನೇಕ ಮಾರ್ಗಗಳಲ್ಲಿ ಅಭ್ಯಾಸ ಮಾಡುತ್ತಿದ್ದುದೆಲ್ಲವೂ ತೋರಿಕೆಯದ್ದಾಗಿದೆ ಎಂದು ನನಗೆ ಅನ್ನಿಸುತ್ತಿತ್ತು. ನಾನು ಹೆಚ್ಚು ಆಳವಾದ ಮತ್ತು ಜೀವನಕ್ಕೆ ಹೆಚ್ಚು ಹೊಂದಿಕೊಂಡಿರುವ ಮಾರ್ಗವನ್ನು ಹುಡುಕುತ್ತಿದ್ದೆ. ಯಾವುದೇ ಮಾರ್ಗಕ್ಕೆ ಸೇರಲು ಬೇಕಾದಷ್ಟು ಮನವರಿಕೆ ನನ್ನಲ್ಲುಂಟಾಗಲು ಸಾಧ್ಯವಿಲ್ಲ ಎಂದು ಬಹುತೇಕ ನಂಬಿದ್ದ ನಾನು ಗೊಂದಲದಲ್ಲುಳಿದಿದ್ದೆ. ಈಗ ನಾನು ಸ್ಥಿರತೆ ಮತ್ತು ನೆಲೆಯನ್ನು ಪಡೆದಂತೆ ಅನ್ನಿಸುತ್ತಿದೆ. ನನ್ನೊಳಗಿನ ಮತ್ತು ಹೊರಗಿನ ಸೌಂದರ್ಯವನ್ನು ಅನುಭವಿಸುತ್ತಿದ್ದೇನೆ. ಇದಕ್ಕಾಗಿ ಋಷಿಗಳು, ಗುರೂಜಿ ಮತ್ತು ಮಾನಸ ಬಳಗಕ್ಕೆ ನಾನು ಚಿರಋಣಿ.

– ಅಂಜಲಿ ಮೆಹ್ತಾ

ನಿರ್ಣಾಯಕ ಸಮಯಗಳನ್ನು ಕಳೆದ ನಂತರ ತುಂಬ ಕಡಿಮೆ ಸಮಯದಲ್ಲಿ ನನ್ನ ಮೂಲಸ್ಥಿತಿಗೆ ನಾನು ಹಿಂತಿರುಗುತ್ತಿದ್ದೇನೆ ಎಂದು ಈಗ ಅರಿತುಕೊಂಡಿದ್ದೇನೆ. ಮೊದಲಾಗಿದ್ದರೆ, ನೋವು ಅಥವಾ ಕೋಪ ದಿನಗಟ್ಟಲೆ ನನ್ನೊಂದಿಗೆ ಇರುತ್ತಿದ್ದವು! ನನ್ನನ್ನು ಯಾವುದೇ ವಿಷಯ ತುಂಬ ಉದ್ವಿಗ್ನಗೊಳ್ಳುವಂತೆ ಮಾಡಿದಾಗ ನಾನು ಧ್ಯಾನಕ್ಕೆ ಕುಳಿತುಕೊಳ್ಳುತ್ತೇನೆ. ಇದು, ನಕಾರಾತ್ಮಕತೆಗಳನ್ನು ಕಳೆದುಕೊಳ್ಳಲು ಮತ್ತು ನಾನು ತಪ್ಪಾಗಿ ಬಳಸಿದ್ದ ಎಲ್ಲ ಚೈತನ್ಯಗಳನ್ನು ಸರಿದೂಗಿಸಿಕೊಂಡು ಬೆಳಕಿಗೆ ಮರಳಲು, ನನಗೆ ಸಹಾಯಮಾಡುವುದಕ್ಕಾಗಿ ಜೀವನವೇ ಈ ಸನ್ನಿವೇಶಗಳನ್ನು ತಂದಿದೆ ಎಂದು ಅರಿತುಕೊಳ್ಳಲು ಸಹಾಯಮಾಡಿದೆ.

– ಗೀತಾ ಬಾಲಕೃಷ್ಣನ್

ಬಿಕ್ಕಟ್ಟಿನ ಸಂಬಂಧಗಳಿಂದಾಗಿ ಜನರು ದುಃಖದಿಂದಿರುವುದನ್ನು ನಾನು ನೋಡುತ್ತೇನೆ. ಆದರೆ ನಾನು ಸಂತೋಷದಿಂದಿದ್ದೇನೆ, ಏಕೆಂದರೆ ನೀವು ನನಗೆ ಅನೇಕ ವಿಷಯಗಳನ್ನು ಕಲಿಸಿದ್ದೀರಿ; ಸಣ್ಣಪುಟ್ಟ ವಿಷಯಗಳು ಈಗ ನನ್ನನ್ನು ವಿಚಲಿತಗೊಳಿಸುವುದಿಲ್ಲ. ನಾನು ಶಾಂತಿ ಮತ್ತು ಸಮಾಧಾನದಿಂದಿರಲು ಸಾಧ್ಯವಾಗಿದೆ. ನನ್ನನ್ನು ತಿದ್ದಿಕೊಳ್ಳುವುದು ಸವಾಲಾಗಿದ್ದರೂ, ಇದನ್ನು ಪ್ರತಿದಿನವೂ ಪ್ರಯತ್ನಿಸುತ್ತಿದ್ದೇನೆ. ಮಾರ್ಗದರ್ಶಿಸುತ್ತಿರುವುದಕ್ಕಾಗಿ ಮತ್ತು ನನ್ನನ್ನು ರೂಪಿಸುತ್ತಿರುವುದಕ್ಕಾಗಿ ನಾನು ನಿಮಗೆ ಯಾವಾಗಲೂ ಕೃತಜ್ಞಳಾಗಿರುತ್ತೇನೆ.

– ಚಾರುಶೀಲಾ ಬಿರಾಜ್‌ದಾರ್

ನಿಜವಾದ ಸಂತೋಷ ನಮ್ಮೊಳಗಿರುವ ಒಂದು ಗುಣ; ಯಾವುದೇ ಸಮಯದಲ್ಲಾದರೂ ಇದು ಹೊರಹೊಮ್ಮಲು ಅವಕಾಶಮಾಡಿಕೊಡುವುದು ಸುಲಭ. ಬಾಹ್ಯ ವಸ್ತುಗಳನ್ನು 'ಕೆಟ್ಟದ್ದು' ಅಥವ 'ಸುಖವಿಲ್ಲದ್ದು' ಎಂದು ತೀರ್ಮಾನಿಸಬಹುದು. ಹೀಗಿದ್ದರೂ ಸಹ, ನನಗೆ ಆ ಆಂತರಿಕ ಸಂತೋಷ ಮತ್ತು ಶಾಂತಿಗಳ ಮೂಲವನ್ನು ಹೊರತರುವುದನ್ನು ಮುಂದುವರಿಸಲು ಸಾಧ್ಯವಾದರೆ, ಇದು ಯಾವುದೇ ಸಂದರ್ಭದ ಮೇಲೂ ಸಕಾರಾತ್ಮಕ ಪ್ರಭಾವ ಬೀರುತ್ತದೆ. ಇತ್ತೀಚಿನ ದಿನಗಳಲ್ಲಿ 'ಬೆಳಕಿನ ಸಾಗರದ ಸಂಪರ್ಕದಲ್ಲಿರುವ' ಮತ್ತು 'ಆನಂದವನ್ನು ಹರಡುವ' ಅಭ್ಯಾಸಗಳನ್ನು ನಿಜವಾಗಿಯೂ ಆನಂದಿಸುತ್ತಿದ್ದೇನೆ.

– ಲಿಂಡಾ ಸಾಯರ್

ಔಷಧಿಗಳನ್ನು ಸೇವಿಸುತ್ತಿದ್ದರೂ ಸಹ ನನ್ನ ಗಂಟಲಿನ ತೊಂದರೆ ದಿನೇ ದಿನೇ ಹದಗೆಡುತ್ತಿತ್ತು. ಐದು ದಿನಗಳು ಮಾತನಾಡಬಾರದೆಂದು ನನಗೆ ಸೂಚಿಸಿದರು. ಆಗ 'ಹೀಲರ್ಸ್ ಗ್ರೂಪ್'ನಿಂದ ಪಡೆದ ಪ್ರತಿಕ್ರಿಯೆಯಿಂದ ನಾನು ಭಾವಪರವಶಳಾದೆ. ಅನೇಕರು ನನ್ನನ್ನು ಸಂಪರ್ಕಿಸಿ ನನ್ನ ಆರೋಗ್ಯದ ಬಗ್ಗೆ ವಿಚಾರಿಸಿದರು. ನನಗೆ ಏಕತೆಯ ಅನುಭವವಾಯಿತು. ಈ ಐದು ದಿನಗಳು ನನಗೆ ಪರಿವರ್ತನಾ ದಿನಗಳಾದುವು. ನಾನು ಜನರನ್ನು ಆಲಿಸುವುದು, ಗಮನಿಸುವುದು ಮತ್ತು ಹೆಚ್ಚು ಅರ್ಥಮಾಡಿಕೊಳ್ಳುವುದನ್ನು ಕಲಿತೆ. ನನಗೆ ಕೊಟ್ಟ ಒಂದು ಅವಕಾಶ ಇದು ಎಂದು ನನಗನಿಸಿದೆ.

– ರಾಜಶ್ರೀ ಪದಕಿ

ನನ್ನ ಕೆಲಸದ ವಾತಾವರಣ ಮತ್ತು ಕೆಲಸದ ವಿಧಾನ ಈಗ ಉತ್ತಮಗೊಂಡಿದೆ. ನಿಮ್ಮ ಮಾತುಗಳು, ನೆನಪುಗಳು ಮತ್ತು ಮಾರ್ಗದರ್ಶನ ನನ್ನ ಕೆಲಸದ ಸ್ಥಳವನ್ನು ತುಂಬಿದೆ ಮತ್ತು ತನ್ನ ಪರಿಮಳವನ್ನು ಹರಡುತ್ತಿದೆ. ನಾನು ಮತ್ತು ಇತರರೂ ಇದನ್ನು ಅನುಭವಿಸುತ್ತಿದ್ದೇವೆ. ನನ್ನ ಜೀವನದ ಎಲ್ಲ ಸ್ತರಗಳಲ್ಲೂ ನೀವು ಮತ್ತು ಋಷಿಗಳು ಯಾವಾಗಲೂ ನನ್ನ ಜೊತೆ ಇರುವುದನ್ನು ಅನುಭವಿಸುವುದು ಒಂದು ಬಹುದೊಡ್ಡ ಸಂಗತಿಯಾಗಿದೆ.

– ತಿಮ್ಮಯ್ಯ ನಾಗರಾಜ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ಬೇರೆ ಗ್ರಹಗಳ ಮೇಲೂ ಜೀವ–ಶಕ್ತಿ ಇದೆಯೇ?**

ಉ: ಇದೆ. ಈ ಸೃಷ್ಟಿಯಲ್ಲಿ ಎಲ್ಲಾ ಕಡೆ ಮತ್ತು ಎಲ್ಲಾ ಗ್ರಹಗಳ ಮೇಲೆ ಜೀವ–ಶಕ್ತಿ ಇದೆ. ಇದು ಇನ್ನೊಂದು ಮೂಲ ಘಟಕವಿದ್ದಂತೆ; ಆರನೇ ಮೂಲ ಘಟಕ.

**ಪ್ರ: ಈ ಭೂಮಿಯ ವಿಶೇಷತೆಗಳೇನು?**

ಉ: ಈ ಭೂಮಿಯಲ್ಲಿ ವೈವಿಧ್ಯತೆಗಳಿವೆ – ಪರ್ವತಗಳು, ನದಿಗಳು, ಹಕ್ಕಿಗಳು, ಚಿಟ್ಟೆಗಳು. ಇಲ್ಲಿ ನಮಗೆ ಒಳ್ಳೆಯದು ಮತ್ತು ಕೆಟ್ಟದ್ದಕ್ಕೆ ಸಮಾನ ಅವಕಾಶಗಳಿವೆ. ಜನರು ಈ ಭೂಮಿಯಲ್ಲಿ ಹೋರಾಟಗಳು, ಸವಾಲುಗಳನ್ನು ಅನುಭವಿಸಲು ಜನ್ಮತಾಳುತ್ತಾರೆ. ಏಕೆಂದರೆ ಎಲ್ಲಾ ಭೂಮಿಗಳಲ್ಲಿ ಇವು ಇರುವುದಿಲ್ಲ. ಇಲ್ಲಿ ನಮಗೆ ಭಾವನೆಗಳಿವೆ, ಭಾವುಕತೆಯಿದೆ ಮತ್ತು ಕಲ್ಪನೆಗಳಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಇಲ್ಲಿ ನಮಗೆ ಭರವಸೆಗಳಿವೆ.

ಪ್ರ; ಭಾವುಕತೆ ನಮ್ಮ ಸಾಧನೆಯ ಹಾದಿಯಲ್ಲಿ ಅಡ್ಡವಾಗುತ್ತದೆಯೇ?

ಉ: ಭಾವುಕತೆ ಅವಶ್ಯಕ ಮತ್ತು ಅಗತ್ಯ. ಆದರೆ ಕೆಲವೊಮ್ಮೆ, ಬಲವಾದ ಭಾವುಕತೆ ನಮ್ಮ ಸಾಧನೆಯ ಹಾದಿಯಲ್ಲಿ ಅಡ್ಡವಾಗುತ್ತದೆ. ಅದು ನಮ್ಮನ್ನು ಅವಲಂಬಿಸಿದೆ. ಎಂದಾದರೊಂದು ದಿನ ನಾವು ಭಾವುಕತೆಯನ್ನು ಮೀರಿ ಹೋಗಿ ಸಾಧನೆಯ ಮೊದಲ ಹೆಜ್ಜೆಯಾದ ಸಮಾಧಿಯನ್ನು ಅನುಭವಿಸಬೇಕಾಗುತ್ತದೆ.

ಪ್ರ: ನಾವು ಆಧ್ಯಾತ್ಮಿಕ ಅಜ್ಞಾನವನ್ನು ಹೋಗಲಾಡಿಸುವುದು ಹೇಗೆ?

ಉ: ಜ್ಞಾನದ ಬೆಳಕು ಆಧ್ಯಾತ್ಮಿಕ ಅಜ್ಞಾನವನ್ನು ಹೋಗಲಾಡಿಸುತ್ತದೆ. ನಾವು ಪುರಾತನ ಜ್ಞಾನವನ್ನು ಮತ್ತು ಹೊಸ ಜ್ಞಾನವನ್ನು ಕೂಡಾ, ತಿಳಿಯಲು ಮತ್ತು ಓದಲು ಪ್ರಯತ್ನಿಸಬೇಕು. ನಾವು ವಿಶಾಲ ಮನೋಭಾವವನ್ನು ಹೊಂದಿರಬೇಕು. ನಾವು ನಿತ್ಯವೂ ಧ್ಯಾನವನ್ನು ಮಾಡಬೇಕು, ಅದು ನಮ್ಮ ಜ್ಞಾನವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಪ್ರ: ದೇವರುಗಳು ಮತ್ತು ದೇವತೆಗಳು ಇದ್ದಾರೆಯೇ ಅಥವಾ ಅದು ನಮ್ಮ ಕಲ್ಪನಾ–ಸೃಷ್ಟಿಯೇ?

ಉ: ಈ ಸೃಷ್ಟಿ, ಈ ಪ್ರಪಂಚಗಳು ಬೆಳಕಿನಿಂದ ಬಂದಿವೆ ಮತ್ತು ದೇವರು, ತಾನೇ ವಿವಿಧ ದೇವರುಗಳ ಮತ್ತು ದೇವತೆಗಳ ರೂಪಗಳಲ್ಲಿ ವ್ಯಕ್ತಗೊಂಡಿದ್ದಾನೆ ಎಂದು ಮಾಸ್ಟರ್‌ಗಳಾದ ಋಷಿಗಳು ನಮಗೆ ತಿಳಿಸಿದ್ದಾರೆ.

ಪ್ರ: ನಾನು ಋಷಿಗಳ ಕೆಲಸವನ್ನು ತೆಗೆದುಕೊಳ್ಳಲು ಏನನ್ನು ಬಿಡಬೇಕು ಅಥವಾ ತ್ಯಾಗ ಮಾಡಬೇಕು?

ಉ: ಋಷಿಗಳ ಕೆಲಸವನ್ನು ತೆಗೆದುಕೊಳ್ಳಲು, ನಾವು ನಮ್ಮ ಅಹಂ–ಅನ್ನು ಬಿಡಬೇಕು, ನಮ್ಮ ಎಲ್ಲಾ ವೈಯಕ್ತಿಕ ಕಾರ್ಯಕಲಾಪಗಳನ್ನು ಬದಿಗಿಡಬೇಕು ಮತ್ತು ಶರಣಾಗಬೇಕು. ನಮ್ಮ ಎಲ್ಲಾ ಮೋಹಗಳನ್ನು ಬಿಡಬೇಕು ಹಾಗೂ ನಮ್ಮ ಸ್ವಾರ್ಥ, ನಕಾರಾತ್ಮಕತೆಗಳು ಮತ್ತು ಅಂಧವಿಶ್ವಾಸಗಳನ್ನು ಬಿಡಬೇಕು. ನಾವು ಋಷಿಗಳ ಕೈಯಲ್ಲಿನ ಸಾಧನವಾಗಿರಬೇಕು.

**ಪ್ರ: ನಾವು ಕ್ರಿಕೆಟ್ ಆಟಗಾರರಿಗೆ ಬೆಳಕನ್ನು ಚಾನಲ್ ಮಾಡಬಹುದೇ?**

ಉ: ನಾವು ವಿಶ್ವಶಾಂತಿಗಾಗಿ ಬೆಳಕನ್ನು ಚಾನಲ್ ಮಾಡುತ್ತೇವೆ. ಬೆಳಕು ಯಾವುದೇ ಪಕ್ಷ ವಹಿಸುವುದಿಲ್ಲ. ನೀವು ಪ್ರಾರ್ಥನೆ ಮಾಡಬಹುದು ಮತ್ತು ನಿಮ್ಮ ಆಲೋಚನೆಗಳನ್ನು, ಚೈತನ್ಯಗಳನ್ನು ಆಟಗಾರರಿಗೆ ಕಳುಹಿಸಬಹುದು. ಅದು ತುಂಬಾ ಸಕಾರಾತ್ಮಕ ಕಾರ್ಯವಾಗಿರಬೇಕು.

ಪ್ರ: ನಮ್ಮ ಭೌತಿಕ ಗುರಿಗಳ ಸಾಧನೆಗೆ ಬೆಳಕನ್ನು ಕಳುಹಿಸಬಹುದೇ?

ಉ: ನೀವು ಪ್ರಾರ್ಥಿಸಿದರೆ ಮತ್ತು ಬೆಳಕನ್ನು ಹೊಂದಿದ್ದರೆ ಸಾಕು. ಯಾವತ್ತೂ ಬೆಳಕನ್ನು ದುರುಪಯೋಗ ಪಡಿಸಬೇಡಿ. ಅಂದರೆ, ಯಾವತ್ತೂ ಯಾರಿಗೂ ಒಂದು ನಿರ್ದಿಷ್ಟ ಉದ್ದೇಶದಿಂದ ಬೆಳಕನ್ನು ಕಳುಹಿಸಬಾರದು. ಬೆಳಕಿಗೆ ತನ್ನದೇ ಆದ ಬುದ್ಧಿವಂತಿಕೆ ಇದೆ ಮತ್ತು ಅದು ಎಲ್ಲವನ್ನೂ ಈಡೇರಿಸುವುದಿಲ್ಲ. ಬೆಳಕನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಿ.

ಪ್ರ: ನಮ್ಮ ಮಾತುಗಳನ್ನು ಯಾವುದು ತುಂಬಾ ಪರಿಣಾಮಕಾರಿಯಾಗಿ ಮಾಡುತ್ತದೆ?

ಉ: ನೀವು ಸತ್ಯವನ್ನು ಹೇಳುತ್ತಿದ್ದರೆ, ಶಬ್ದಗಳಿಗೆ ಎಲ್ಲಾ ಪ್ರಭಾವ ಮತ್ತು ಪರಿಣಾಮಗಳಿರುತ್ತವೆ. ನಿಮ್ಮಲ್ಲಿ ಪರಿಶುದ್ಧತೆಯಿದ್ದರೆ ಮತ್ತು ನಿಮ್ಮ ಉದ್ದೇಶ ಒಳ್ಳೆಯದಾಗಿದ್ದರೆ, ನಿಮ್ಮ ಮಾತುಗಳ ಹಿಂದೆ ತುಂಬಾ ಶಕ್ತಿಯಿರುತ್ತದೆ.

ಪ್ರ: ನಾವು ದೇವರ ಅನುಗ್ರಹವನ್ನು ಸಂಪಾದಿಸುವುದು ಹೇಗೆ?

ಉ: ನಾವು ಪ್ರಾಮಾಣಿಕವಾಗಿ ಬೆಳಕನ್ನು ಹೊಂದಿರುವ, ಅನುಭವಿಸುವ ಮತ್ತು ಜೀವ–ಶಕ್ತಿ ಚೈತನ್ಯವನ್ನು ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಲು ಆರಂಭಿಸಿದಾಗ ದೇವರ ಅನುಗ್ರಹ ನಮ್ಮ ಮೇಲೆ ಬರುತ್ತದೆ. ಅನುಗ್ರಹ ಯಾವಾಗಲೂ ಕೆಳಗಿಳಿಯಲು ಕಾಯುತ್ತಿರುತ್ತದೆ, ಆದರೆ ನಾವು ನಮ್ಮ ನಕಾರಾತ್ಮಕ ಆಲೋಚನೆಗಳಿಂದ ಮತ್ತು ಭಾವನೆಗಳಿಂದ ಅದನ್ನು ತಡೆಯುತ್ತೇವೆ. ಅನುಗ್ರಹಕ್ಕೆ ನಾವು ಅವಕಾಶ ಮಾಡಿಕೊಡಬೇಕು. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



### ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ಕಲ್ಕತ್ತಾದ ಸಾಂಸ್ಕೃತಿಕ ಭವನದಲ್ಲಿ ಧ್ಯಾನ ಮಾಡುತ್ತಿದ್ದಾಗ, 'ರಾ' ಚೈತನ್ಯವನ್ನು ಪಡೆಯುವುದು ಸುಲಭವೆಂದು ಗುರೂಜಿಯವರು ಈ ಹಿಂದೆ ಹೇಳಿದ್ದ ಮಾತು ನೆನಪಾಯಿತು. ಆ ಚೈತನ್ಯವು ಒಂದು ಶಕ್ತಿಯುತವಾದ ಸುಳಿಯಂತೆ ಬಂದು ನನ್ನನ್ನು ಸೇರಿತು. ನನಗೆ ಸುಂಟರಗಾಳಿಯೊಂದರ ಮಧ್ಯೆ ಸಿಲುಕಿ ಕೊಚ್ಚಿಹೋದ ಅನುಭವವಾಯಿತು. ಆಗ ಎಲ್ಲಿಂದಲೋ ಒಂದು ಧ್ವನಿ 'ಗುರೂಜಿಯವರು ಅತಿ ಹೆಚ್ಚಿನ ಬೆಳಕನ್ನು ಜಪಾನಿಗೆ ಕಳುಹಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ಕೃತಜ್ಞರಾಗಿರಿ' ಎಂದು ಹೇಳಿದುದು ನನಗೆ ಕೇಳಿಸಿತು.

– ಇಕುಕೊ

ನಾನು ಧ್ಯಾನದಲ್ಲಿ, ಜಪಾನಿನಲ್ಲಾದ ಭೂಕಂಪ ಮತ್ತು ಸುನಾಮಿಯನ್ನು ಗುರೂಜಿಯವರೊಂದಿಗೆ ವೀಕ್ಷಿಸುತ್ತಿದ್ದುದನ್ನು ಕಂಡೆ. ನಂತರ ಗುರೂಜಿಯವರು "ಇದೇ ರೀತಿ ಅನೇಕ ಘಟನೆಗಳು ಸಂಭವಿಸುತ್ತವೆ. ನಾವು ಏನೂ ಮಾಡಲು ಸಾಧ್ಯವಿಲ್ಲ. ಬದಲಾಗಲು ಸಿದ್ಧರಾಗಿರುವ ಇತರರಿಗಾಗಿ ನಾವು ಶಕ್ತಿಯುತರಾಗಬೇಕಾಗಿದೆ" ಎಂದು ತಿಳಿಸಿದರು. ಇದಾದ ಸ್ವಲ್ಪ ಸಮಯದ ನಂತರ ಬೇರೊಂದು ಸ್ಥಳಕ್ಕೆ ಹೋದೆವು. ಅಲ್ಲಿ ನನಗೆ ಭೂಮಿಯಿಂದ ಹೊರಹೊಮ್ಮಿ ಸುತ್ತಲೂ ಹರಡುತ್ತಿದ್ದ ಹೊಂಬೆಳಕು ಕಾಣಿಸಿತು. ಆ ಚೈತನ್ಯಗಳು ಶುದ್ಧವಾಗಿ ಮತ್ತು ಬಲಯುತವಾಗಿದ್ದವು ಮತ್ತು ನಾನು ಅವುಗಳನ್ನು ಅನುಭವಿಸುತ್ತಿದ್ದೆ. ಇವುಗಳು ಶುದ್ಧೀಕರಣ ಪ್ರಕ್ರಿಯೆಗಳಿಗಾಗಿ ಬಂದವುಗಳೆಂದು ಗುರೂಜಿಯವರು ತಿಳಿಸಿದರು.

– ರಾಖಿ

ಭ್ರಷ್ಟಾಚಾರದ ವಿರುದ್ಧ ಗುಂಪು ಚಳುವಳಿಯನ್ನು ವೀಕ್ಷಿಸುತ್ತಿದ್ದಾಗ ನಾನು ಭಾವುಕನಾದೆ ಮತ್ತು ನನ್ನ ಕಣ್ಣುಗಳಲ್ಲಿ ನೀರು ತುಂಬಿತು. ಆ ಚಳುವಳಿಯ ಹಿಂದೆ ಇದ್ದ ಋಷಿಗಳ ದಿವ್ಯ ಚೈತನ್ಯ ಎಲ್ಲ ಕಡೆ ಆವರಿಸಿರುವುದರ ಅನುಭವ ನನಗಾಯಿತು.

– ವಿಶ್ವಾಸ್ ದೀಕ್ಷಿತ್

ಕೆಲವು ದಿನಗಳಿಂದ ಲೈಟ್ ಚಾನಲ್ ಮಾಡುವ ಸಮಯದಲ್ಲಿ ನಾನು ತಿಳಿನೀಲಿ ಬಣ್ಣದ ಬೆಳಕನ್ನು ಊಹಿಸಿಕೊಂಡಾಗ ಅದು ತಕ್ಷಣ ಕಡುನೀಲಿ ಬಣ್ಣಕ್ಕೆ ಬದಲಾಗುತ್ತಿದೆ. ಹಾಗೆಯೇ ಶಂಬಲದ ಮೊದಲನೆಯ ನಿಯಮವನ್ನು ಅಭ್ಯಾಸ ಮಾಡುವಾಗ ಹೊಂಬಣ್ಣದ ಚೈತನ್ಯವನ್ನು ಊಹಿಸಿದರೂ ಅದು ಕೂಡಾ ನೀಲಿ ಬಣ್ಣಕ್ಕೆ ಬದಲಾದಂತೆ ನನಗನಿಸುತ್ತದೆ. ಏಪ್ರಿಲ್ 7ರ ರಾತ್ರಿ ಲೈಟ್ ಚಾನಲ್ ಮಾಡುವಾಗ ಅದು ಕಡುನೀಲಿ ಬಣ್ಣಕ್ಕೆ ಬದಲಾಯಿತು. ತಕ್ಷಣ ನನ್ನ ಮುಖದಲ್ಲಿ ಮುಗಳ್ನಗೆ ಮೂಡಿ ಚಾನಲ್ ಮಾಡುವುದು ಮರೆತು ಹೋಯಿತು. ಆಗ "ಈ ಚೈತನ್ಯಗಳನ್ನು ಪಡೆದು ಬೇಗ ಪರಿವರ್ತನೆ ಹೊಂದು" ಎಂದು ಯಾರೋ ಹೇಳುತ್ತಿರುವುದು ನನಗೆ ಕೇಳಿಸಿತು.

– ಪ್ರಗತಿ ರಾಜ್

ಧ್ಯಾನದಲ್ಲಿ ಭಗವಂತನಿಗೆ ಸಮೀಪವಾದ ಅನುಭವ ಶೀಘ್ರವಾಗಿ ನನಗೆ ಆಗುತ್ತದೆ. ತಂತಾನೆ ಅದು ನನ್ನ ಕೇಂದ್ರಬಿಂದುವಾಗುತ್ತದೆ, ಅದು ಎಷ್ಟು ಪ್ರಬಲವಾಗಿರುತ್ತದೆ ಎಂದರೆ ಬೇರೆ ಯಾವುದೂ ಮುಖ್ಯವೆಂದೆನಿಸುವುದಿಲ್ಲ. ದಿನವಿಡೀ ನನ್ನ ಆಂತರ್ಯದಲ್ಲಿಯೇ ನನ್ನ ಗಮನವಿರುತ್ತದೆ. ಪ್ರಶಾಂತ ಹಾಗೂ ಸಂತೃಪ್ತಿಯ ಒಳಪ್ರಪಂಚದ ಮತ್ತು ಹೊರಪ್ರಪಂಚದ ಎರಡೂ ಅರಿವು ಏಕಕಾಲದಲ್ಲಿ ಇರುತ್ತದೆ. ಇವೆರಡೂ ಸಮಾನಾಂತರವಾಗಿ ನಡೆಯುತ್ತವೆ. ಸಮತೋಲನ ಸ್ಥಿತಿಯ ಈ ಅನುಭವ ನನಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡುತ್ತದೆ.

– ವಿದ್ಯಾ ವಿಶ್ವಾಮಿತ್ರ

18–04–2011ರ ನನ್ನ ಕನಸಿನಲ್ಲಿ, ನಾನು ಮತ್ತು ಸುನೀಲ್ ಒಂದು ದೊಡ್ಡ ಕೊಠಡಿಗೆ ಬಂದೆವು. ಅಲ್ಲಿ ಗುರೂಜಿಯವರು ನಿಂತಿದ್ದರು ಮತ್ತು ಜೊತೆಗೆ ಉದ್ದವಾದ ಬಿಳಿಯ ಬಣ್ಣದ ಕೂದಲು ಹಾಗೂ ಗಡ್ಡವನ್ನು ಹೊಂದಿದ್ದ ಋಷಿಯೊಬ್ಬರು ಹೋಮಕುಂಡವೊಂದರ ಮುಂದೆ ಕುಳಿತಿದ್ದರು. ನಾನು ಆ ಕೊಠಡಿಗೆ ಹೋದ ತಕ್ಷಣ ಅಲ್ಲಿದ್ದ ಪ್ರಬಲ ಚೈತನ್ಯಗಳಿಂದಾಗಿ ನಾನು ತಲೆತಿರುಗಿ ಬಿದ್ದೆ. ಆಗ ಗುರೂಜಿಯವರು ನನಗೆ ದೀಕ್ಷೆ ನೀಡಿದರು. ನಾನು ಅವರಿಗೆ ವಂದಿಸಿದೆ. ಅವರು ನನ್ನ ಗಂಟಲಿನ ತಳಭಾಗವನ್ನು 'ಓಂ' ಆಕಾರದಲ್ಲಿ ರಚಿತವಾದ ಮುತ್ತುಗಳಿಂದ ಸ್ಪರ್ಶಿಸಿದರು.

– ಕೀರ್ತಿ ಬಿಸರಹಳ್ಳಿ

ನನ್ನ ಮಾವನವರು ಒಳ್ಳೆ ಗಾಲ್ಫ್ ಆಟಗಾರರು. ದುರದೃಷ್ಟವಶಾತ್ ಕಳೆದ ಕೆಲವು ವರ್ಷಗಳಿಂದ 'ಸಯಾಟಿಕ'ದಿಂದಾಗಿ ಅವರಿಗೆ ವಾರಕ್ಕೆ ಒಂದು ದಿನ ಮಾತ್ರ ಗಾಲ್ಫ್ ಆಡಲು ಸಾಧ್ಯವಾಗುತ್ತಿತ್ತು. ನಾನು ಮತ್ತು ನನ್ನ ಪತಿ ಇಬ್ಬರೂ ಎರಡು ತಿಂಗಳಿನಿಂದ ಧ್ಯಾನ ಹಾಗೂ ಲೈಟ್ ಚಾನಲ್ ಮಾಡುತ್ತಿದ್ದೇವೆ. ಈಗ ಅವರಿಗೆ ವಾರದಲ್ಲಿ 3–4 ದಿನ ಆಟ ಆಡಲು ಸಾಧ್ಯವಾಗುತ್ತಿದೆ. 10 ನಿಮಿಷಗಳ ಕಾಲ ಸಹ ನಿರಂತರವಾಗಿ ನಡೆದಾಡಲಾಗದಿದ್ದ ಅವರನ್ನು ಈ ಮಟ್ಟಕ್ಕೆ ಬೆಳಕು ಗುಣ ಪಡಿಸಿರುವುದು ಒಂದು ಪವಾಡವೇ ಆಗಿದೆ. ನಮಗೆ ಸಹಾಯ ಮಾಡುತ್ತಿರುವ ಬೆಳಕಿಗೆ ಮತ್ತು ಸಪ್ತಋಷಿಗಳಿಗೆ ನಾವು ಕೃತಜ್ಞರು.

– ಜ್ಯೋತಿ ಗಜ್ಜಾರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ